ಹೊಸ ಪಠ್ಯಕ್ರಮ (೨೦೦೫-೦೬ ಮತ್ತು ೨೦೦೬-೦೭ ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ)
**New Scheme** ( For Students studied during the Years 2005-06 & 2006-07 )

**Code No. 01-NS**

Total No. of Questions : 50 ] [ Total No. of Printed Pages : 7

**July, 2007**

# KANNADA

**( New Syllabus )**

Time : 3 Hours ] [ Max. Marks : 90

## ಅ - ವಿಭಾಗ

I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : 10 × 1 = 10

1) ದ್ರೌಪದಿಯ ವಸ್ತ್ರಾಪಹಾರ ಮಾಡಿಸಿದವನು ಯಾರು ?

2) ಲೋಹಿತಾಶ್ವ ಕಾಡಿಗೆ ಹೋದುದೇಕೆ ?

3) ಇಳೆಗೆ ಮಳೆ ಬರುವುದು ಯಾವ ಮೋಡದಿಂದ ?

4) ಸ್ತೂಪ-ಬಸ್ತಿಗಳು ಎಲ್ಲೆಲ್ಲಿವೆ ?

5) ಟುವ್ವಿ ಹಕ್ಕಿಯ ಗೂಡು ಯಾವುದರಿಂದ ನಿರ್ಮಾಣವಾಗಿತ್ತು ?

6) ಜೊಹರಾಳ ಎರಡು ಮಕ್ಕಳ ಹೆಸರುಗಳನ್ನು ಬರೆಯಿರಿ.

7) ಯಾವುದು ರೋಗದ ಮಾರ್ಗ ?

[ Turn over

8) ಸೈನಿಕರ ಪ್ರಕಾರ ಪವಿತ್ರ ಕರ್ತವ್ಯ ಯಾವುದು ?

9) ಕಲಿಯಲು ಏನು ಬೇಕೆಂದು ಏಕಲವ್ಯ ಹೇಳುತ್ತಾನೆ ?

10) ರಣರಂಗದಲ್ಲಿ ಚೆನ್ನಾಗಿ ಹೋರಾಡಬೇಕಾದರೆ ಏನು ಮಾಡಬೇಕೆಂದು ಸೈನಿಕನು ಹೇಳುತ್ತಾನೆ ?

## ಆ - ವಿಭಾಗ

II. ಅ) ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : 4 × 2

11) ದೃಢವಿಲ್ಲದ ಭಕ್ತಿಯನ್ನು ಲಕ್ಕಮ್ಮ ಹೇಗೆ ಬಣ್ಣಿಸಿದ್ದಾಳೆ ?

12) ಲೋಹಿತಾಶ್ವ ದರ್ಭೆಯನ್ನು ಕಂಡಾಗ ಏನೆಂದುಕೊಂಡನು ?

13) ಪಶ್ಚಿಮಾಂಗನೆ ಗರ್ವಪಡಲು ಕಾರಣಗಳೇನು ?

14) ಏಸುಕ್ರಿಸ್ತ, ಬುದ್ಧ, ಮಹಾವೀರರು ಎಲ್ಲಿದ್ದಾರೆಂದು ಕವಿ ಹೇಳಿದ್ದಾನೆ ?

15) ಮನೆಯಲ್ಲಿ ಸೂತಕದ ವಾತಾವರಣ ಉಂಟಾಗಲು ಕಾರಣವೇನು ?

ಆ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : 3 × 2

16) ಕುವೆಂಪು ಅವರು ಯಾವುದಕ್ಕೆ ಸಂಪೂರ್ಣ ವಿದಾಯ ಹೇಳಿದ್ದರು ?

17) ಗಂಡನಿಗೆ ಆಭರಣಗಳನ್ನು ಜೊಹರಾ ಏಕೆ ಕೊಡಲಿಲ್ಲ ?

18) ಪ್ಯಾರಿಸ್ಸಿನಲ್ಲಿ ಲೇಖಕರು ಕಾರಿನಲ್ಲಿ ಹೊರಟದ್ದು ಎಲ್ಲಿಗೆ ?

19) ವಚನಕಾರರು ಸ್ವಂತಿಕೆಯನ್ನು ಹೇಗೆ ಕಾಪಾಡಿಕೊಂಡರು ?

ಇ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

20) ಮರವನ್ನು ಕುರಿತು ಶೆಟ್ಟಿ ಹೇಳುವ ಮಾತುಗಳಾವುವು ?

21) ಕಲಿಯುವ ಕುತೂಹಲವನ್ನು ಏಕಲವ್ಯ ಹೇಗೆ ವ್ಯಕ್ತಪಡಿಸುತ್ತಾನೆ ?

22) ಕಾಡಿನ ವೀರ ಏಕಲವ್ಯನನ್ನು ಕುರಿತು ದುರ್ಯೋಧನನ ಅಭಿಪ್ರಾಯವೇನು ?

23) ಯುದ್ಧ ತಂತ್ರವನ್ನು ಕೃಷ್ಣ ವಿವರಿಸಿದ್ದು ಹೇಗೆ ?

## ಇ - ವಿಭಾಗ

III. ಅ) ಕೆಳಗಿನ ಯಾವುದಾದರೂ ಎರಡಕ್ಕೆ ಸಂದರ್ಭ ಸೂಚಿಸಿ ಟಿಪ್ಪಣಿ ಬರೆಯಿರಿ : $2 \times 3 = 6$

24) ಛಿಃ ಸತ್ತರೇಂ ಪುಟ್ಟರೆ.

25) ಎಂತೆಂಥವೋ ವಿಜೃಂಭಿಸಿ ಮೀಸೆ ತಿರುವುತ್ತವೆ.

26) ತಮ್ಮ ನೆರಳಿಗೇ ಅಪರಿಚಿತರು.

ಆ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ–ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

27) ಅದು ನನ್ನ ತಪ್ಪು ತಾನೇ ?

28) ಇಂಥ ಯತ್ನ ಇಲ್ಲಿಗೇ ನಿಂತೀತೇ ?

ಇ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ–ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

29) ಲೋಕದಲ್ಲಿ ನಾನೀಗ ಅಸಹಾಯಕ.

30) ನನ್ನನ್ನು ಮೀರಿಸಿದ ಬಿಲ್ಲುಗಾರನಾಗಿದ್ದೀಯೆ.

## ಈ – ವಿಭಾಗ

IV. ಅ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

31) ದುರ್ಯೋಧನನ ಅಹಂಕಾರವನ್ನು ಛಿದ್ರಿಸುವುದಕ್ಕೆ ಭೀಮನು ಹೇಳುವ ಪೂರ್ವ ಸಂಗತಿಗಳನ್ನು ವಿವರಿಸಿ.

32) ಅಳಿಮನದವನ ಭಕ್ತಿಗೆ ದಾಸಿಮಯ್ಯ ಕೊಟ್ಟ ದೃಷ್ಟಾಂತ ಯಾವುದು ?

33) ಹೊಟ್ಟೆಪಾಡಿಗಾಗಿ ಮನುಷ್ಯರು ಮಾಡುವ ನಾನಾ ಪ್ರಯತ್ನಗಳನ್ನು ಕನಕದಾಸರು ಹೇಗೆ ವಿಡಂಬಿಸಿದ್ದಾರೆ ?

34) ಪತಿಯು ಪತ್ನಿಯನ್ನು ಹೇಗೆ ಕಾಣಬೇಕೆಂದು ಹೊನ್ನಮ್ಮ ಹೇಳುತ್ತಾಳೆ ?

ಆ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

35) ಕುವೆಂಪು ಅವರ ಧಾರ್ಮಿಕತೆ ಮತ್ತು ವೈಚಾರಿಕತೆಯನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ ?

36) ಅನಿಸ್ವಾಳಿಗೆ ಯಾವ ಯಾವ ಚಿಕಿತ್ಸೆ ನೀಡಲಾಯಿತು ? ಅದರ ಪರಿಣಾಮವೇನಾಯಿತು ?

37) 'ಸುದಾಮೆ ಮಾತಿಗೆ ತಪ್ಪದ ಹೆಣ್ಣು.' ಹೇಗೆ ? ವಿವರಿಸಿ.

ಇ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

38) ದ್ರೋಣಾಚಾರ್ಯರ ಬಳಿ ವಿದ್ಯೆ ಕಲಿಯಲು ಏಕೆ ಹೋಗಬಾರದೆಂದು ಮಾವನು ಹೇಳುತ್ತಾನೆ ? ವಿವರಿಸಿ.

39) ಏಕಲವ್ಯ ತನ್ನ ಮತ್ತು ಕರ್ಣರಲ್ಲಿರುವ ವ್ಯತ್ಯಾಸವನ್ನು ಹೇಗೆ ವಿವರಿಸುತ್ತಾನೆ ?

40) ಪಾಂಡವರನ್ನು ಬೆಂಬಲಿಸಲು ಏಕಲವ್ಯ ನಿರಾಕರಿಸುವುದು ಏಕೆ ?

## ಉ – ವಿಭಾಗ

ಅ) ಕೆಳಗಿನ ಯಾವುದಾದರೂ ಒಂದು ಪದ್ಯಕ್ಕೆ ಭಾವಾರ್ಥವನ್ನು ಬರೆಯಿರಿ : $1 \times 5 = 5$

41) ಅಳುರ್ದೆ ಕೊಳೆ ಭೀಮಕೋಪಾ

ನಳನೆಸರ್ಗಾಯ್ದಿಟ್ಟ ತೆರದೆ ಮರುಗಿದಾಗಳ್

ಕೊಳನ ಜಲಮೆಯ್ದೆ ಕಾಯ್ದೆಸ

ರೊಳೆ ಕೂಳ್ ಕುದಿವಂತೆ ಕುದಿದುವನಿಮಿಷತತಿಗಳ್.

42) ಹೊದೆಗಡಿದು ಹತ್ತಿ ಹುತ್ತನು ಸುತ್ತಿದೆಳಹುಲ್ಲ

ಹೊದರ ಹಿಡಿದಡಿಸಿ ಬಿಡದರಿದು ಸೆಳೆಯಲ್ ಕಯ್ಯ

ಹೆದರ ಹಪ್ಪನೆ ಹಾರಿಹಾ ! ಎಂದು ಕೈ ಕಾಲ

ಕೆದರಿ ತಲೆ ಕೆಳಗಾಗಿ ಕೆಡೆದನಕಟಕಟ ಮದ

ಮುದಿತ ರಾಹುಗ್ರಸ್ತನಾದ ತರುಣೇಂದುಬಿಂಬಂ ನೆಲಕೆ ಬೀಳ್ವಂದದೆ ।

ಆ) ಭಾಷಾಭ್ಯಾಸ

ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : $3 \times 2 = 6$

43) ಈ ಪದಗಳಿಗೆ ಅರ್ಥ ಬರೆಯಿರಿ :

ಅದಟ, ಪೂಕ.

44) ಈ ಪದಗಳ ನಿಷೇದ ರೂಪ ಬರೆಯಿರಿ :

ನೋಡು, ಮಾಡು.

45) ಅಂಕಿತ ನಾಮಕ್ಕೆ ಎರಡು ಉದಾಹರಣೆ ಕೊಡಿ.

46) ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ :

ಕಾಡುಪಾಲಾಗು, ಹೊಟ್ಟೆಯುರಿ.

ಇ) ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ : $1 \times 5 = 5$

47) ಗಡಿವಿವಾದ

48) ಸುವರ್ಣ ಕರ್ನಾಟಕದ ಕನಸು

ಈ) ಪತ್ರಲೇಖನ

49) ನೀವು ಕಂಡ ರಸ್ತೆ ದುರಂತ ಕುರಿತು ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. $1 \times 4 = 4$

ಅಥವಾ

50) ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ :

ಪಾಲಿಗೆ ಬಂದದ್ದು ಪಂಚಾಮೃತ.